ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 37/2017 ಸಿಡಬ್ಲೂಃ 12 ಪಿ ಡಬ್ಲೂಃ 12**

| | |
|---|---|
| ಹೆಸರು | ಡಾ. ಕುಮಾರ್ |
| ತಂದೆಯ ಹೆಸರು | ಹುಚ್ಚೇಗೌಡ |
| ವಯಸ್ಸು | 51 ವರ್ಷ |
| ವೃತ್ತಿ | ಖಾಸಗಿ ವೈದ್ಯರು |
| ವಾಸ | ಮೈಸೂರು |

ದಿನಾಂಕಃ 10.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ನಾನು ಜನವರಿ 2017 ರಿಂದ ಜುಲೈ 2019 ರವರೆಗೂ ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಯಲ್ಲಿ ನೈಟ್ ಡ್ಯೂಟಿ ಡಾಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.
2. ದಿನಾಂಕಃ 29.03.2017 ರಂದು ರಾತ್ರಿ 8.30 ಗಂಟೆಗೆ ನಾಗೇಂದ್ರ ಬಿನ್ ಪುಟ್ಟಲಿಂಗೇಗೌಡ, 45 ವರ್ಷ, ಬ್ರಹ್ಮಪುರ, ಮಂಡ್ಯ ರವರು ನೇರವಾಗಿ ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಆತನನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಕಂಡ ಗಾಯಗಳಾಗಿರುತ್ತವೆ.

   1. Laceration on the scalp 3 X 4 c.m., bone deep with blood stained.

   2. Tenderness and swelling with contusion on the left thigh

   3. Tenderness in right shoulder

ಗಾಯಾಳುವಿಗೆ ಎಕ್ಸ್ ರೇ ಮಾಡಲಾಗಿ ಆತನಿಗೆ ಮೂಳೆಯಲ್ಲಿ ಯಾವುದೇ ತೊಂದರೆ ಇಲ್ಲ ಎಂದು ತಿಳಿಸಿರುತ್ತಾರೆ. ಸದರಿ ಮೇಲೆ ಹೇಳಿರುವ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

3. ಅದೇ ದಿನ ರಾತ್ರಿ 8.35 ಗಂಟೆಗೆ ಶಿವಮ್ಮ ಕೋಂ ಕೃಷ್ಣಪ್ಪ , 55 ವರ್ಷ, ಬ್ರಹ್ಮಪುರ, ಮಂಡ್ಯ ರವರು ನೇರವಾಗಿ ಹಲ್ಲೆಯ ಹಿನ್ನೆಲೆಯಲ್ಲಿ ನಾಗೇಂದ್ರ ಅವರು ನಮ್ಮ ಆಸ್ಪತ್ರೆಗೆ ಕರೆ ತಂದಿರುತ್ತಾರೆ. ಆಕೆಯನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಕಂಡ ಗಾಯಗಳಾಗಿರುತ್ತವೆ.

1. Pain in the right thigh with contusion

2. Complaint of chest pain.

ಗಾಯಾಳುವಿಗೆ ಎಕ್ಸ್ ರೇ ಮಾಡಲಾಗಿ ಆಕೆಗೆ ಮೂಳೆಯಲ್ಲಿ ಯಾವುದೇ ತೊಂದರೆ ಇಲ್ಲ ಎಂದು ತಿಳಿಸಿರುತ್ತಾರೆ. ಸದರಿ ಮೇಲೆ ಹೇಳಿರುವ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

4. ಅದೇ ದಿನ ರಾತ್ರಿ 8.30 ಗಂಟೆಗೆ ನಿತಿನ್ ಬಿನ್ ನಾಗೇಂದ್ರ, 18 ವರ್ಷ, ಬ್ರಹ್ಮಪುರ, ಮಂಡ್ಯ ರವರು ನೇರವಾಗಿ ಹಲ್ಲೆಯ ಹಿನ್ನೆಲೆಯಲ್ಲಿ ನಾಗೇಂದ್ರ ರವರು ನಮ್ಮ ಆಸ್ಪತ್ರೆಗೆ ಕರೆ ತಂದಿರುತ್ತಾರೆ. ಆತನನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಕಂಡ ಗಾಯಗಳಾಗಿರುತ್ತವೆ.

1. Lacerated wound on the scalp 3 X 4 c.m.,

ಸದರಿ ಮೇಲೆ ಹೇಳಿರುವ ಗಾಯವು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

5. ಅದೇ ದಿನ ರಾತ್ರಿ 8.25 ಗಂಟೆಗೆ ಭಾಗ್ಯ ಕೋಂ ನಾಗೇಂದ್ರ, 36 ವರ್ಷ, ಬ್ರಹ್ಮಪುರ, ಮಂಡ್ಯ ರವರು ನೇರವಾಗಿ ಹಲ್ಲೆಯ ಹಿನ್ನೆಲೆಯಲ್ಲಿ ನಾಗೇಂದ್ರ ರವರು ನಮ್ಮ ಆಸ್ಪತ್ರೆಗೆ ತಂದಿರುತ್ತಾರೆ. ಆಕೆಯನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಕಂಡ ಗಾಯಗಳಾಗಿರುತ್ತವೆ.

1. Tenderness and swelling on right knee joint.

2. Pain and Swelling in left shoulder.

ಗಾಯಾಳುವಿಗೆ ಬಲಭಾಗದ ಮಂಡಿ ಎಕ್ಸ್ ರೇ ಮಾಡಲಾಗಿ ಆಕೆಗೆ air line fracture of right lateral condyle of right tibia ಎಂದು ಮೂಳೆ ವೈದ್ಯರು ತಿಳಿಸಿರುತ್ತಾರೆ. ಸದರಿ ಮೇಲೆ ಹೇಳಿರುವ ಗಾಯಗಳ ಪೈಕಿ 1ನೇ ಗಾಯವು ತೀವ್ರ ಸ್ವರೂಪದ್ದಾಗಿದ್ದು, 2ನೇ ಗಾಯವು ಸಾಮಾನ್ಯ ಸ್ವರೂಪದ್ದಾಗಿರುತ್ತದೆ. ನಾನು ಮೇಲೆ ಹೇಳಿರುವ ಗಾಯಗಳು ಎಂ ಒ 1 ಮತ್ತು 2 ರಿಂದ ಹಲ್ಲೆ ಮಾಡಿದ್ದಲ್ಲಿ ಆಗುತ್ತದೆ ಎಂದರೆ ಸರಿ.

**ಮಾನ್ಯ ಎಪಿಪಿ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಗಿದೆ.**

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*